

ಅವರೊಂದಿಗೆ ಇದ್ದೆನೇ ಹೊರತು ಅವರ ಸಹಾಯಕನಾಗಿ ಹೆಚ್ಚು ಕಾಲ ಉಳಿಯಬಾರದು ಎಂದೇ ಯೋಚಿಸಿದ್ದೆ. ರಮಾನಾಥರು ನನ್ನನ್ನು ಅವರ ಸಹಾಯಕನಾಗಿ ಅಥವಾ ಅದಕ್ಕಿಂತ ಹೆಚ್ಚು ಕಂಡಿದ್ದರೂ ನಾನು ಚಿತ್ರರಂಗದಲ್ಲಿ ಬೆಳೆಯಲು ಯಾವುದೇ ಸಹಾಯ ಮಾಡುತ್ತಿಲ್ಲ ಎಂದುಕೊಳ್ಳುತ್ತಿದ್ದೆ. ಬಹುಶಃ ಅವರಿಗೆ ನನ್ನ ಮಿತಿಗಳು ಗೊತ್ತಿರಬೇಕು. ನಾನೋ ದೊಡ್ಡ ಸೂಪರ್‌ಸ್ಟಾರ್ ಮಟೀರಿಯಲ್ ಎಂದು ನಂಬಿಕೊಂಡೇ ಈ ರಂಗಕ್ಕೆ ಬಂದು ಬಿದ್ದಿದ್ದೆ.

ರಮಾನಾಥರದು ಆತ್ಮಹತ್ಯೆ ಎಂದು ಪ್ರಾಥಮಿಕ ತನಿಖೆಯಿಂದ ದೃಢಪಟ್ಟಿತು. ಅವರು ಪುಟ್ಟದೊಂದು ಡೆತ್‌ನೋಟ್ ಬರೆದಿಟ್ಟಿದ್ದರು. ಮುದ್ದಾದ ಅವರ ಸ್ವಂತ ಅಕ್ಷರಗಳಿಂದ ತಮ್ಮ ಸಾವಿಗೆ ಯಾರೂ ಕಾರಣರಲ್ಲ ಎಂದೇ ಬರೆದಿದ್ದರು.

ನಂತರ ಆಗಿದ್ದು ನನ್ನನ್ನು ಮತ್ತಷ್ಟು ಕುಗ್ಗಿಸುವ ವಿಷಯ. ಅವರ ಸ್ಥಿರಾಸ್ತಿಗಳನ್ನು ತಮ್ಮ ಮಕ್ಕಳಿಗೆ ನೀಡಿ ತಮ್ಮ ನಗದು ಬಹುಪಾಲು ನನಗೆ ಸೇರುವಂತೆ ಮಾಡಿದ್ದರು. ನನಗಾಗಿ ಅವರ ಡೈರಿಯಲ್ಲಿ ಒಂದು ಪತ್ರ ಬರೆದಿದ್ದರು. ನಿನಗೆ ಉಜ್ವಲ ಭವಿಷ್ಯವಿದೆ ಎಂದು ಹಾರೈಸಿದ್ದರು. ಅವರು ಅದರಲ್ಲಿ ಹೇಳಿಕೊಂಡಿದ್ದು ಒಂದೇ. ನನ್ನ ಪತ್ನಿ ಇರುವಾಗ ನಾನು ಆಕೆಗಾಗಿ ಬದುಕಿದ್ದೇನೆ ಎನಿಸುತ್ತಿತ್ತು. ಆಕೆ ಇಲ್ಲದ ಮನೆಯಲ್ಲಿ ಒಂಟಿಯಾಗಿ ಇರಲಾರೆ. ಆಕೆಯ ಸ್ಥಾನವನ್ನು ಯಾರೂ ತುಂಬಲಾರರು ಎನ್ನಿಸಿದಾಗ ಈ ಜೀವ ಕಳೆದುಕೊಳ್ಳುವ ನಿರ್ಧಾರ ಕೈಗೊಂಡೆ. ಆತ್ಮಹತ್ಯೆ ತಪ್ಪು. ಆದರೆ ನನ್ನ ಸ್ಥಾನದಲ್ಲಿ ನಿಂತು ಬದುಕನ್ನು